JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# "ಸಿದ್ಧಲಿಂಗಯ್ಯನವರು ಕಂಡಂತೆ ಅಂಬೇಡ್ಕರ್ ಮತ್ತು ಗಾಂಧಿ"

**ಲೇಖನ ಸಿದ್ಧ ಪಡಿಸಿದವರು**

ಮುನಿರಾಜು ಕೆ

ಕನ್ನಡ ಸಹಾಯಕ ಪ್ರಾಧ್ಯಾಪಕರು

,ಸ.ಪ್ರ.ದ.ಕಾಲೇಜು ಕಲಾ,ವಿಜ್ಞಾನ ಮತ್ತು ವಾಣಿಜ್ಯ, ಸಿರಾ.572137

ಎಪ್ಪತ್ತರ ದಶಕದ ಹೊಸ ಮನ್ವಂತರ ಸಾಹಿತ್ಯ ಪ್ರಕಾರದ ದಲಿತ ಕವಿ ಎಂದು ಗುರುತಿಸಿಕೊಂಡಿರುವ ದಲಿತ – ಬಂಡಾಯ ಸಾಹಿತ್ಯ ಚಳುವಳಿಯ ಕವಿ ಹೋರಾಟಗಾರ ಡಾ.ಸಿದ್ಧಲಿಂಗಯ್ಯ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂದರೆ ಈಗಿನ ಮಾಗಡಿ ತಾಲ್ಲೂಕಿನ ಮಂಚನಬೆಲೆಯ ಮಣ್ಣಿನ ಸೊಗಡಿನಲ್ಲಿ ಹುಟ್ಟಿ ಬಡತನದ ಬವಣೆಯಲ್ಲಿ ಬೆಂದು ಬಸವಳಿದು, ಪುಟವಿಟ್ಟ ಚಿನ್ನವಾಗಿ ಬೆಳೆದು ಕವಿಯಾಗಿದ್ದಾರೆ.

ಈ ಲೇಖನದಲ್ಲಿ 'ಸಿದ್ಧಲಿಂಗಯ್ಯನವರು ಕಂಡಂತೆ ಅಂಬೇಡ್ಕರ್ ಮತ್ತು ಗಾಂಧಿ' ಎಂಬ ಶೀರ್ಷಿಕೆಯನ್ನು ಇಡಲಾಗಿದೆ. ಅಂಬೇಡ್ಕರ್ ಮತ್ತು ಗಾಂಧಿ ಭಾರತ ದೇಶದ ಎರಡು ಧ್ರುವತಾರೆ ಮತ್ತು ನಕ್ಷತ್ರಗಳು. ಭಾರತ ದೇಶದ ಸ್ವಾತಂತ್ರ್ಯ ಮತ್ತು ದಲಿತರ ಸ್ವಾತಂತ್ರ್ಯಕ್ಕಾಗಿ ದುಡಿದ ಮಹನೀಯರು. ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆ,ಆದರ್ಶ ಹೋರಾಟ ಮತ್ತು ಕಳಕಳಗಳಲ್ಲಿ ವೈರುಧ್ಯದ ಎರಡು ತುತ್ತತುದಿಗಳನ್ನಾಗಿ ಗುರುತಿಸಲಾಗಿದೆ. ಅಂದರೆ "ಗಾಂಧಿ ಕtÚ°è ಅಂಬೇಡ್ಕರ್ ವಿಚಾರಧಾರೆಗಳನ್ನು ಮತ್ತು ಅಂಬೇಡ್ಕರ್ ಕಣ್ಣಲ್ಲಿ ಗಾಂಧಿ ವಿಚಾರಗಳನ್ನು ನೋಡಿದಾಗ ಅವರ ವೈಶಿಷ್ಟ್ಯ ನಮಗೆ ತಿಳಿಯುತ್ತದೆ. ಅಂಬೇಡ್ಕರ್ ಮತ್ತು ಗಾಂಧಿ ತಾವು ನಂಬಿದ ವಿಚಾರ, ಹೋರಾಟ ಹಾಗೂ ಆದರ್ಶಗಳಲ್ಲಿ, ಅನನ್ಯ ಶ್ರದ್ಧೆ ಪ್ರಶ್ನೆ ಮಾಡಲಾಗದ ಪಾರದರ್ಶಕ ಪ್ರಾಮಾಣಿಕತೆವುಳ್ಳವರಾಗಿದ್ದಾರೆ.

ಜನವು ದಿಕ್ಕೆಟ್ಟಿರಲು ಹಾರಿದಿರಿ ಹಕ್ಕಿಯಂತೆ

ಭಾರತವು ಕಡುನೀಲ ಗಗನದಲ್ಲಿ

ಜೀವ ಚೈತನ್ಯವನ್ನು ತುಂಬಿದಿರಿ ತಾಯಿಯಂತೆ

ಬಸವಳಿದ ಜನಮನದ ಭಾವದಲ್ಲಿ

ಇಲ್ಲಿ ಗಾಂಧೀಜಿ ಭಾರತೀಯ ದಾಸ್ಯದ ಸಂಕೋಲೆಯನ್ನು ಕಂಡು ಬ್ರೀಟಿಷರ ದಬ್ಬಾಳಿಕೆಯನ್ನು ಕಂಡು ಹೇಗಾದರೂ ಮಾಡಿ ಭಾರತವನ್ನು ಸ್ವತಂತ್ರ್ಯಗೊಳಿಸಲು, ಜ್ಞಾನ ಸಂಪಾದನೆಗಾಗಿ ವಿದೇಶದಲ್ಲಿ ಜ್ಞಾನ ಪಡೆಯಲು ಅಲ್ಲಿಗೆ ತೆರಳಿ ಅಲ್ಲಿನ ತಾರತಮ್ಯವನ್ನು ಕಂಡು ಅದನ್ನು ದಿಕ್ಕರಿಸಿ , ಹೋರಾಡಿ ಚಳುವಳಿ ಸತ್ಯಾಗ್ರಹಕ್ಕಾಗಿ ನೂರುಬಾರಿ ಪ್ರಯತ್ನಪಟ್ಟು ಹೋರಾಟದ ಹಲವು ಪಟ್ಟುಗಳನ್ನು ಪಡೆದು ಭಾರತಕ್ಕೆ ಜೀವ ತುಂಬಲು ಬರುತ್ತಾರೆ ಎಂದು ಇಲ್ಲಿ ಚಿತ್ರಿಸಿದ್ದಾರೆ.

ಛತ್ರ ಚಾಮರವಿಲ್ಲ ಬಹುಪರಾಕುಗಳಿಲ್ಲ

ಭಾರತದ ಬೀದಿಯಲ್ಲಿ ಅರಸನಂತೆ

ನಡೆದುಬಂದಿರಿ ನೀವು ನೊಂದ ಜೀವಿಯ ಕಂಡು

ತಬ್ಬಿಕೊಂಡಿರಿ ಚಾಚಿ ತಂದೆಯಂತೆ

ಗಾಂಧೀಜಿಯವರು ಶಕ್ಷಣ ಮುಗಿಸಿ ಭಾರತಕ್ಕೆ ಬಂಧಂತಹ ಸಂದರ್ಭದಲ್ಲಿ ಅವರಿಗೆ ಯಾವುದೇ ಸ್ವಾಗತ ಇರಲಿಲ್ಲ ಏಕೆಂದರೆ ಆ ಜನಅಂಗದವರು ಬನಿಯ ಜನಾಂಗದ ವ್ಯಕ್ತಿ ವಿದೇಶಕ್ಕೆ ಹೋಗಿ ವದ್ಯೆ ಕಲಿಯುವುದು ತಮ್ಮ ಆಚಾರ ವಿಚಾರಗಳಿಗೆ ಸರಿ ಇಲ್ಲ ಎಂದು ಗಾಂಧೀಜಿಯನ್ನು ವಿರೋಧಿಸಿದರು. ಆದರೆ ಭಾರತಕ್ಕೆ ಬಂದಂತಹ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜಾತಿ ಪದ್ದತಿ ಹಿಂದೂಧರ್ಮಕ್ಕೆ ಅಂಟಿದ ಶಾಪ ಎನ್ನುತ್ತ ನೊಂದವರ ಪರವಾಗಿ ಇರುತ್ತಿದ್ದರು. ಗಾಂದೀಜಿಯನ್ನು ದಲಿತ ಸಮುದಾಯ ವಿಭಿನ್ನವಾಗಿ ಕಂಡಿದೆ.

ನಮ್ಮ ನಡುವೆ ನಿಂತ ದೀನ

ದಲಿತ ಜನರ ಹಲ್ಲೆಗೈದ

ಈ ದೇಶದ ಗಾಂಧಿ

ಯಥಾಸ್ಥಿತಿಗೆ ನಾಂದಿ

ಎಂದು ವಿ. ಮುನಿವೆಂಕಟಪ್ಪನವರು ಗಾಂಧಿಯನ್ನು ಕಂಡರೆ ಸಿದ್ದಲಿಂಗಯ್ಯನವರು ಛತ್ರಛಾಮರವಿಲ್ಲ,ಬಹುಪರಾಕುಗಳಿಲ್ಲ ಎಂದು ಎಲ್ಲರಂತೆ ಗಾಂಧೀಜಿ ಕೂಡ ಸಾಮಾನ್ಯ ವ್ಯಕ್ತಿ ಎಂದು ಚಿತ್ರಿಸಿದ್ದಾರೆ. ಹಾಗೆ ಮುಂದುವರೆಯುತ್ತ

ಜಾತಿಮತದ ವಿಷಯ ಮಂಜು ಕರಗಲಿ ಎಂದು

ಬಿಸಿಲಿನಲ್ಲಿ ತಿರುಗಿದಿರಿ ದೇಶವೆಲ್ಲ

ಹುಲ್ಲು ಕರಿಕೆಗಳಿಗೂ ಕೂಡ ಪ್ರಾಣಮಾನಗಳುಂಟು

ಎಂಬುದನ್ನು ಸಾರಿದಿರಿ ಲೋಕಕೆಲ್ಲ

ನೀವು ಧನ್ಯರು ಗಾಂಧಿ, ನೀವು ದೇವರು ಗಾಂಧಿ

ನಾವಿಂದು ಸೈತಾನರೇಕಾದವು

ಅಂತರಂಗದ ಮಾತ ಏಕೆ ಮರೆತವು ನಾವು?

ಏಕೆ ಬಾರತವನ್ನು ಬಲಿಕೊಟ್ಟೆವು?

ಎಂದಿ ಸಿದ್ದಲಿಂಗಯ್ಯನವರು ಪ್ರಶ್ನಿಸಿದ್ದಾರೆ.

ಗಾಂದೀಜಿಯನ್ನು ಸಿದ್ದಲಿಂಗಯ್ಯನವರು ದೇವರಂತೆ ಚಿತ್ರಸಿದ್ದಾರೆ ಗಾಂದೀಜಿ ಮನುಷ್ರು ಮನುಷ್ಯರ ನಡುವೆ ಯಾವದೇ ಸಾಮಾಜಿಕ ಅಸಮಾನತೆ ಇಲ್ಲದೇ ಜಾತಿಬೇಧವಿಲ್ಲದೇ ಎಲ್ಲರು ಸಮಾನವಾಗಿ ಇರಬೇಕು ಎಂದು ಬಯಸಿದ್ದರು. ಹಾಗೆ ಜಾತಿ ಮತದ ವಿಷ ಮಂಜಿನಂತೆ ಕರಗಬೇಕು ನಿರ್ಮೂಲನೆ ಅಗಬೇಕು ಜಗತ್ತಿನ ಎಲ್ಲ ಜೀವ ಜಂತುಗಳಿಗೂ ಪ್ರಾಣ ಮಾನಗಳುಂಟು ಪ್ರತಿಯೊಂದು ಜೀವಿಗೂ ಬದುಕುವ ಅರ್ಹತೆ ಇದೆ ಎಂದು ಜಗತ್ತಿಗೆ ಸಾರಿದ್ದಾರೆ .ಎಲ್ಲ ಬಗೆಯ ಆಡಳಿತ ದೌರ್ಜನ್ಯ ಹುಸಿತನ ಡಾಂಬಿಕತೆ ಶೋಷಣೆಗಳನ್ನು ತೀವ್ರವಾಗಿ ವಿರೋದಿಸುತ್ತ ಬಂದವರು ನೀವು. ಎಲ್ಲ ಬಗೆಯ ದಮನಗಳಿಂದ ಬಿಡುಗಡೆಯಾಗಬೇಕೆಂಬುದು ನಿಮ್ಮ ಆಶಯವಗಿತ್ತು.

ಸತ್ಯ ಅಹಿಂಸೆ,ಉಪವಾಸ,ಸರಳಬದುಕು, ಸತ್ಯಾಗ್ರಹ, ವ್ಯಕ್ತಿಗೆ ಮುಕ್ತವಾದ ಸ್ವಾತಂತ್ರ್ಯ ಎಂಬ ತತ್ವಗಳನ್ನು ಜಗತ್ತಿಗೆ ಸಾರಿದ್ದಿರಿ ಆದರೆ ನಾವೇಕೆ ನಿಮ್ಮ ತತ್ವಗಳನ್ನು ಅರಿಯುವಲ್ಲಿ ವಿಫಲರಾದೇವು, ನಾವು ಇಂದು ಸೈತಾನರಾಗಿದ್ದೇವೆ, ನಮ್ಮ ಅಂತರಂಗದ ಮಾತ ಮರೆತಿದ್ದೆವೆ. ಭಾರತವನ್ನು ಬಲಿ ಕೊಟ್ಟಿದ್ದೇವೆ ಎಂದು ವಿಷಾಧತೆಯನ್ನು ವ್ಯಕ್ತಪಡಿಸಿದ್ದಾರೆ.

ಅಂಬೇಡ್ಕರ್ ನಮ್ಮ ಸಮುದಾಯದ ಸಮಷ್ಟಿಪ್ರಜ್ಞೆಯಾಗಿ ಕಂಡುಬಂದವರು. ಅಸ್ಪೃಶ್ಯ ಸಮುದಾಯದ ಅಂತಃಸಾಕ್ಷಿಯನ್ನು ಬಡಿದೆಚ್ಚರಿಸಿದ್ದರು. ಅವರ ಸ್ಥಾನಮಾನವನ್ನು ಯಾರೂ ತುಂಬಲು ಸಾಧ್ಯವಿಲ್ಲ . ತಳಸ್ಪರ್ಶಿ ಅಧ್ಯಯನ ,ಪ್ರಕರವಾದ ವೈಚಾರಿಕತೆ, ಸಾಮಾಜಿಕ ಪಿಡುಗುಗಳ ಮೂಲವನ್ನು ಶೋಧಿಸಿ ಪರಿಹಾರವನ್ನು ಹುಡುಕುವ ಅನ್ವೇಷಕ ಪ್ರವೃತ್ತಿ ಮತ್ತು ಸೂಕ್ಷ್ಮ ಒಳನೋಟಗಳಿಂದ ಅಂಬೇಡ್ಕರ್ ಅವರು ಚಲನರಹಿತವಾದ ಸಮಾಜವು ಸಮಾನತೆಯತ್ತ ಚಲಿಸುವುದಕ್ಕೆ ಚಾಲನೆ ನೀಡಿದರು. ಜಗತ್ತೆ ನಿಬ್ಬೆರಗು ಆಗುವಂತೆ ತಮ್ಮ ಪಾಂಡಿತ್ಯ ಮತ್ತು ತಮ್ಮ ಹೋರಾಟಗಳ ಮೂಲಕ ಮೂಕ ಸಮುದಾಯವನ್ನು ಮುನ್ನೆಡಿಸಿದ್ದರು.

ಸಿದ್ಧಲಿಂಗಯ್ಯನವರ ಅಂಬೇಡ್ಕರ್ ಎಂಬ ಕವಿತೆಯಲ್ಲಿ ಈ ರೀತಿ ಚಿತ್ರಿಸಿದ್ದಾರೆ.

ನಾಡ ನಡುವಿನೀಂದ ಸಿಡಿದ

ನೋವಿನ ಕೂಗೇ

ಆಕಾಶದ ಅಗಲಕ್ಕೂ

ನಿಂತ ಆಲವೇ

ಕೋಟಿಕೋಟಿ ಕಪ್ಪುಜನರ

ಮೊಟ್ಟಮೊದಲ ಮಾತೆ

ನೀರಿನಾಚೆ ಮೋಡದಾಚೆ

ಮೊಳಗಿದಂಥ ಘೋಷವೇ

ಅಂಬೇಡ್ಕರ್ ಅವರು ಬಾಲ್ಯದಿಂದಲೂ ಅಸ್ಪೃಶ್ಯರ ನೋವನ್ನು ಕಂಡವರು ಉಂಡವರು. ನೋವು, ಸಂಕಟ ,ಅಪಮಾನ ನಿಂದನೆ ಅಸ್ಪೃಶ್ಯತೆಯ ನೋವನ್ನು ಅನುಭವಿಸಿದ ಅಂಬೇಡ್ಕರ್ ತಮ್ಮ ಸಮುದಾಯ ಅನುಭವಿಸಿದ ಯಾತನೆಯನ್ನು ಖಂಡಿಸಿದ್ದಾರೆ. ಹೋರಾಟದ ಕಿಚ್ಚನ್ನು ಮೂಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಸಮಾಜದಲ್ಲಿ ಮೇಲು ಕೀಳು, ಸ್ಪೃಶ್ಯ- ಅಸ್ಪೃಶ್ಯ, ಕರಿಯ -ಬಿಳಿಯ ಎಂದು ತಾರತಮ್ಯ ಮಾಡಿ ದಲಿತರನ್ನು ಕೀಳಗಿ ಕಾಣುತ್ತಿದ್ದರು. ಅಂಥಹ ಜನರಿಗೆ ಹೋರಾಟದ ಕಿಚ್ಚನ್ನು ಹಚ್ಚಿದ್ದರು ಅಂಬೇಡ್ಕರ್. ದೇಶದಲ್ಲಿ ಅಷ್ಟೇ ಅಲ್ಲದೇ ವಿದೇಶದಲ್ಲೂ ಅಪಮನದ ವಿರುದ್ದ ಹೋರಾಟ ಮಾಡಿದೆ. ಜಗತ್ತಿನ ಜ್ಞಾನದ ಪ್ರತಿನಿಧಿಯಾಗಿ ಗುರುತಿಸಿಕೊಂಡವರು ಅಂಬೇಡ್ಕರ್, ಜಾತಿವ್ಯವಸ್ಥೆ ಅದರ ಅಮಾನುಷ ದಬ್ಬಾಳಿಕೆ, ಅಸ್ಪೃಶ್ಯತೆ ಆದರ ಅಮಾನವಿಯ ಆಚರಣೆಯನ್ನು ಖಂಡಿಸಿದ್ದರು.

ಬಾಳಿನಲ್ಲೆ ಕಂಡುಕೊಂಡೆ

ಹೋರಾಟದ ದಾರಿಯ

ಕರೆದು ಕರೆದು ತೋರಿಸಿದೆ

ಮಹಮನೆಯ ಬಿರುಕನು

ಭಾರತದಲ್ಲಿ ಹೋರಾಟಕ್ಕೆ ನಾಂದಿ ಹಾಡಿದವರು ಅಂಬೇಡ್ಕರ್, ಶಿಕ್ಷಣ, ಸಂಘಟನೆ, ಹೋರಾಟ ಎಂದು ಅಸ್ಪೃಶ್ಯರು ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾದರೆ ಶಿಕ್ಷಿತರಾಗಿ,ಸಂಘಟಿತರಾಗಿ ,ಹೋರಾಟ ಮಾಡಿದಾಗ ಈ ಸಮಾಜದಲ್ಲಿ ಅಸ್ಪೃಶ್ಯತೆ ವಿರುದ್ಧ ತಮ್ಮ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ತಿಳಿಸಿದ್ದರು.

ಪರಾಮರ್ಶನ ಗ್ರಂಥಗಳು

1. ಡಾ.ಸಿದ್ಧಲಿಂಗಯ್ಯ- ಮೆರವಣಿಗೆ, ಅಂಕಿತ ಪುಸ್ತಕ, ಬೆಂಗಳೂರು.

2. ನಾಗಭೂಷಣ ಡಿ.ಎಸ್.- ಗಾಂಧಿಕಥನ ಎಂ ಮೂನಿಸ್ವಾಮಿ ಅಂಡ್ ಸನ್ಸ್ ಪ್ರಕಾಶಕರು, ಬೆಂಗಳೂರು.

3 . ಡಾ.ಪ್ರಹ್ಲಾದ ಅಗಸನಕಟ್ಟೆ- ದಲಿತ- ಬಂಡಾಯ ಕಾವ್ಯ ಮತ್ತು ವಿಚಾರವಾದಗಳು,ಹರ್ಷಪ್ರಕಾಶನ, ಹುಬ್ಬಳಿ.

4. ಡಾ. ಅರವಿಂದ ಮಾಲಗತ್ತಿ- ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

5. ಡಾ.ವೂಡೇ ಪಿ. ಕೃಷ್ಣ, ಲೋಕಚಿಂತಕರು,ಕರ್ನಾಟಕ ಗಾಂಧಿ ಸ್ಮಾರಕನಿಧಿ, ಬೆಂಗಳೂರು.

6. ಮಹಾಬಲೇಶ್ವರ ಕಟ್ರಹಳ್ಳಿ- ಬುದ್ಧ ಬಸವ ಮತ್ತು ಬಾಬಾಸಾಹೇಬ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

7. ಡಾ. ಅರ್ಜುನ ಗೊಳಸಂಗಿ- ಕನ್ನಡ ದಲಿತ ಸಾಹಿತ್ಯ ಸಮಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

8. ಡಾ.ಮುನಿವೆಂಕಟಪ್ಪ- ದಲಿತ ಚಳುವಳಿ ಮತ್ತು ಸಾಹಿತ್ಯ, ತನುಮನ ಪ್ರಕಾಶನ, ಮೈಸೂರು.